



• ಶ್ರೀಸೀತಾಪತಿ ರಾಮಚಂದ್ರೋ ವಿಜಯತೇ •

ಶ್ರೀಅಚ್ಯುತಪ್ರಜ್ಞ ಜಗದ್ಗುರುಶ್ರೀಪೂರ್ಣಪ್ರಜ್ಞ ಶ್ರೀಸತ್ಯತೀರ್ಥಮಹಾಸಂಸ್ಥಾನ, ಶ್ರೀಭಂಡಾರಕೇರಿಮಠ, ಉಡುಪಿ

## ಶ್ರೀಪೂರ್ಣಪ್ರಜ್ಞಟ್ರಸ್ಟ್, ಶ್ರೀರಾಘವೇಂದ್ರಸ್ವಾಮಿಮಠ

ಅಲಕಾಪುರಿ, ಶ್ರೀರಾಮಕೃಷ್ಣಾಪುರ, ಹೈದರಾಬಾದ್,

**ಶ್ರೀವಿದ್ಯಾಮಾನ್ಯತೀರ್ಥಶ್ರೀಪಾದರಿಂದ ಸ್ಥಾಪಿತ ಮಾಧ್ವರಾದ್ಧಾಂತ ಸಂವರ್ಧಕ ಸಭೆಯ ಅಧ್ಯಕ್ಷರಾದ**
**ಶ್ರೀವಿದ್ಯಾಮಾನ್ಯತೀರ್ಥಶ್ರೀಪಾದರ ಕರಕಮಲಸಂಜಾತರಾದ ಶ್ರೀವಿದ್ಯೇಶತೀರ್ಥಶ್ರೀಪಾದರು**

ಹೈದರಾಬಾದಿನ ಶ್ರೀಪೂರ್ಣಪ್ರಜ್ಞ ಟ್ರಸ್ಟ್ ಸಂಸ್ಥೆಯ ಪರವಾಗಿ ಶ್ರೀಹರಿ-ಗುರು ಪ್ರಾರ್ಥನಾಪೂರ್ವಕ

## ವಿದ್ವಾನ್ ಶ್ರೀರಂಗನಾಥಕಟ್ಟಿ ಆಚಾರ್ಯ

ಇವರಿಗೆ ನೀಡಿದ

# ಭಾವದೀಪ ಪ್ರಶಸ್ತಿ.

**ಅಧ್ಯಯನ ಚತುರರೇ!!! ಗುರುಕೃಪಾಭಾಗಿಗಳೇ!!!**

ನೀವು ಭೀಮಾಚಾರ್ಯ ಹಾಗೂ ರಮಾಬಾಯಿ ಇವರಲ್ಲಿ ಜನ್ಮತಳೆದು ಸಕಾಲದಲ್ಲಿ ಶ್ರೀವಾದಿರಾಜರಸಾನ್ನಿಧ್ಯದ ಸೋಂದಾ ಕ್ಷೇತ್ರದಲ್ಲಿ ಉಪನೀತರಾಗಿ ಛಾತ್ರತ್ವಕ್ಕೆ ಶೋಭಾದಾಯಕವಾದ ಹಾಗೂ ಅಗತ್ಯವಾದ ದ್ವೈತವೇದಾಂತಾದಿ ಶಾಸ್ತ್ರಪ್ರಾವೀಣ್ಯವನ್ನು ಪೇಜಾವರ ಮಠಾಧೀಶರಾದ ಶ್ರೀವಿಶ್ವೇಶತೀರ್ಥರ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ 12 ವರ್ಷಗಳ ಕಾಲ ತರ್ಕ-ವ್ಯಾಕರಣ-ವೇದಾಂತಶಾಸ್ತ್ರಗಳ ಅಧ್ಯಯನದಿಂದ ಪಡೆದಿರುವಿರಿ. ನೀವು ತರ್ಕಶಾಸ್ತ್ರದಲ್ಲಿ ರಾಷ್ಟ್ರಮಟ್ಟದಲ್ಲಿ ಪಡೆದಿರುವ ಸ್ವರ್ಣಪದಕ ಪಡೆದಿರುವುದು ಇಂದಿಗೂ ಮಧ್ವಸಮಾಜದ ದಾಖಲೆಯಾಗಿದೆ. ಮುಂದೆ ಪರಮಪೂಜ್ಯ ಪೇಜಾವರ ಮಠಾಧೀಶರಾದ ಶ್ರೀವಿಶ್ವೇಶತೀರ್ಥಶ್ರೀಪಾದರಲ್ಲಿ ಶ್ರೀಮನ್ನ್ಯಾಯಸುಧಾಗ್ರಂಥದ ಮಂಗಳವನ್ನಾಚರಿಸಿದಿರಿ. ನಮ್ಮ ಗುರುಗಳಾದ ಶ್ರೀವಿದ್ಯಾಮಾನ್ಯತೀರ್ಥಶ್ರೀಪಾದರ ಪ್ರವಚನದ-ಸವಿಯನ್ನು, ಅವರ ತಪಃಶಕ್ತಿಯನ್ನು ನೀವು ನೇರ ಕಂಡವರು. ಅವರಿಂದ "ಸಚ್ಛಾಸ್ತ್ರವಿಚಕ್ಷಣ" ಎಂಬ ಪ್ರಶಸ್ತಿಯನ್ನು ಜೊತೆಗೆ ಸ್ವರ್ಣಅಂಗುಲಿಯನ್ನು ಪಡೆದಿರುವಿರಿ. ಪರಮಪೂಜ್ಯ ಪೇಜಾವರ ಮಠಾಧೀಶರಾದ ಶ್ರೀವಿಶ್ವೇಶತೀರ್ಥಶ್ರೀಪಾದರಿಂದ "ಕೃಷ್ಣಾನುಗ್ರಹಪ್ರಶಸ್ತಿ" ಪಡೆದಿರುವಿರಿ. ಶ್ರೀಪಾದರಾಜ ಹಾಗೂ ಇತರ ಮಾಧ್ವಮಠಗಳಿಂದಲೂ ಪುರಸ್ಕೃತರಾಗಿದ್ದೀರಿ.

**ಅತ್ಯುತ್ತಮ ಸಂಶೋಧಕರೇ !!! ತತ್ತ್ವಪ್ರಸಾರಚತುರರೇ, ಸಂಶೋಧಕರೇ ಹಾಗೂ ಗ್ರಂಥಕಾರರೇ!!!**

ನಿಮಗೆ ಅಧ್ಯಯನ ಹಾಗೂ ವಿಮರ್ಶೆ ಪ್ರಿಯವಾದ ಸಂಗತಿಗಳು. ಮಿಗಿಲಾಗಿ ಪೂರ್ಣಪ್ರಜ್ಞಸಂಶೋಧನಮಂದಿರದಲ್ಲಿ ಉಪನಿರ್ದೇಶಕರಾಗಿ ಹತ್ತು ಹಲವಾರು ಸೆಮಿನಾರ್‌ಗಳನ್ನು ನಡೆಸಿ ಚರ್ಚೆ, ವಿಚಾರಗೋಷ್ಠಿ, ಸಂಯೋಜನೆ, ಪ್ರಕಾಶನ, ಜೊತೆಗೆ ವಿದ್ಯಾಪೀಠದ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ, ಸಂದರ್ಭಗಳಲ್ಲಿ ಗ್ರಂಥಾಂತರ್ಗತ ಹೊಸವಿಚಾರವನ್ನು ಉಲ್ಲೇಖಿಸಿ ಹೆಚ್ಚಿನ ಅಧ್ಯಯನಕ್ಕೆ ಹಾದಿತೋರಿದ ಭಾಗ್ಯವಂತರು ನೀವು. ಅನೇಕ ಮಠ-ಮಂದಿರಗಳಲ್ಲಿ ತೀರ್ಥಕ್ಷೇತ್ರಗಳಲ್ಲಿ, ನಾಡಿನ ಮೂಲೆ-ಮೂಲೆಗಳಲ್ಲಿ ಪ್ರವಚನ ನಡೆಸಿದವರು ನೀವು. ಹರಿವಂಶ, ಭಾಗವತ, ನರಸಿಂಹ ಪುರಾಣ, ಉಪನಿಷತ್, ಸರ್ವಮೂಲ ಇವುಗಳಲ್ಲಿ ನೂರಾರು ಉಪನ್ಯಾಸಗಳನ್ನು ನಡೆಸಿದ್ದೀರಿ. ಮೊನಚಾದ ವಿಶ್ಲೇಷಣೆ, ಅಪ್ರಚಲಿತ ನೂತನ ವಿಚಾರಗಳು ನಿಮ್ಮ ಉಪನ್ಯಾಸಗಳಲ್ಲಿ ಹಾಸುಹೊಕ್ಕಾಗಿರುತ್ತವೆ. ಮಿಗಿಲಾಗಿ ಉಳಿದವರಿಗೆ ಪ್ರವಚನನಡೆಸಲು ಬೆನ್ನೆಲುಬಾಗಿ ನಿಲ್ಲುವ ವಿಶಾಲ ಮನೋಭಾವ ನಿಮ್ಮಲ್ಲಿದೆ. ನೀವು ನಿರಂತರ ಅಧ್ಯಯನಶೀಲರಾಗಿದ್ದು ಇಪ್ಪತ್ತಕ್ಕೂ ಮಿಗಿಲಾಗಿ ಕೃತಿಗಳನ್ನು ಸಂಶೋಧಿಸಿ ಪ್ರಕಟಿಸಿದ್ದೀರಿ. ಅದರಲ್ಲೂ ಅಪ್ರಕಟಿತಕೃತಿಗಳ ಪ್ರಕಾಶನವನ್ನು ಟಿಪ್ಪಣಿಗಳೊಂದಿಗೆ ಸೇರಿಸಿ ವಿಚಾರವೈವಿಧ್ಯವನ್ನು ದಾಖಲಿಸುವ ನಿಮ್ಮ ಚಾತುರ್ಯ ಅಪಾರ. ಇತ್ತೀಚಿನ ಕೃತಿಗಳಾದ ಯುಗಧರ್ಮೋದ್ಧಾರ -ಗರುಡಪುರಾಣಸಾರೋದ್ಧಾರ, ಶೇಷತಾತ್ಪರ್ಯಚಂದ್ರಿಕಾ, ಭಾಷ್ಯದೀಪಿಕಾ, ಇವುಗಳಂತೂ ವಿದ್ವಾಂಸರ ಹಾಗೂ ವಿದ್ಯಾರ್ಥಿಗಳ ಮತ್ತು ಜಿಜ್ಞಾಸುಗಳ ಮನೆಮಾತಾಗಿವೆ. ಮಾಸಪತ್ರಿಕೆಗಳಲ್ಲಿ ನಿಮ್ಮ ಸರಣಿಲೇಖನಗಳು, ಸಂಪಾದಕತ್ವ, ಸ್ಮರಣಸಂಚಿಕೆಗಳಲ್ಲಿ ಉದ್ಬೋಧಕ ಲೇಖನಗಳು, ಇದರೊಂದಿಗೆ ಗ್ರಂಥರಚನೆಯು ನಿಮ್ಮ ಹವ್ಯಾಸವಾಗಿದೆ. ಹೀಗೆ ಇಪ್ಪತ್ತಕ್ಕೂ ಮಿಗಿಲಾಗಿ ಗ್ರಂಥರಚನೆ ಸಾಗಿದೆ.

ಇವುಗಳನ್ನೆಲ್ಲ ಪರಿಗಣಿಸಿ ನಿಮಗೆ ಮಧ್ವಾಂತರ್ಗತ ಶ್ರೀವೇದವ್ಯಾಸಾಭಿನ್ನ
ಶ್ರೀಕೋದಂಡರಾಮಚಂದ್ರ ದೇವರಲ್ಲಿ ಶ್ರೇಯಃ ಪ್ರಾರ್ಥನಾಪೂರ್ವಕ

## "ಭಾವದೀಪ ಪ್ರಶಸ್ತಿ"

ನೀಡಿ ಅಭಿನಂದಿಸುತ್ತಿದ್ದೇವೆ.



ಶ್ರೀಮಧ್ವಾಂತರ್ಗತನಾದ ಶ್ರೀವೇದವ್ಯಾಸ-ಹಯಗ್ರೀವಾಭಿನ್ನ-ಶ್ರೀರಾಮಚಂದ್ರದೇವರ ಮಹಾನುಗ್ರಹವನ್ನು ಪ್ರಾರ್ಥಿಸಿ, ಭವಿಷ್ಯತ್ತಿನಲ್ಲೂ ದೇವರು ನಿಮ್ಮಿಂದ ದ್ವಿಗುಣಿತವಾಗಿ ವ್ಯಾಸಮುದ್ರವಾಙ್ಮಯ ಸೇವೆಯನ್ನು ಸ್ವೀಕರಿಸಲಿ ಎಂದು ಹಾರೈಸುತ್ತೇವೆ.

ಇತಿ ನಾರಾಯಣ ಸ್ಮರಣೆಗಳೊಂದಿಗೆ

ಶ್ರೀ ವಿದ್ಯೇಶತೀರ್ಥ ಶ್ರೀಪಾದರು
ಭಂಡಾರಕೇರಿ ಮಠ, ಉಡುಪಿ
ಅಧ್ಯಕ್ಷರು, ಮಾಧ್ವರಾದ್ಧಾಂತ ಸಂವರ್ಧಕ ಸಭಾ

26 February 2023 | ಶುಭಕೃತ್ ಸಂವತ್ಸರದ ಫಾಲ್ಗುಣ ಶುದ್ಧ ಸಪ್ತಮಿ

॥ श्रीरामकृष्णवेदव्यासा विजयन्ते ॥

## श्रीमदच्युतप्रज्ञ-जगद्गुरुश्रीपूर्णप्रज्ञ-श्रीसत्यतीर्थमहापीठम्

श्रीभण्डारकेरिमठः, श्रीभागवताश्रमप्रतिष्ठानम्, गिरिनगरम्, बेङ्गळूरु

प्रातःस्मरणीय-श्रीविद्यामान्यगुरुचरणसंस्थापित-माध्वराद्धान्तसंवर्धकसभा

नूतनश्रीभागवतकीर्तिधाम्नो लोकार्पणशुभावसरे,

श्रीमन्न्यायसुधामङ्गलमहोत्सवाङ्गतया समायोजितविद्वत्सम्मानार्हत्वेन परिगणितानां

## श्रीकट्टि-रङ्गनाथाचार्यमहोदयानां

श्रीविद्यामान्यतीर्थकरकमलसञ्जातैः श्रीविद्येशतीर्थश्रीपादैः सामोदं प्रदत्तं प्रशस्तिपत्रम् ।

श्रीकट्टि-रङ्गनाथाचार्य इति शुभनामधराणां

भवतां श्रीमदानन्दतीर्थरचितसुतीर्थेषु जातानां पाठप्रवचनादिदीक्षामनुलक्ष्य

श्रेयःप्रार्थनापूर्वकम्

# श्रीसुतीर्थभूषणः

इत्युपाधिं प्रदाय सम्भावयामहे ।

प्रसादातिशयहेतुभूतमितोऽप्यतिशयेन माध्ववाङ्मयसेवां

भवन्मुखेन मध्वान्तर्गतो व्यासाभिन्नः श्रीरामचन्द्रः स्वीकरोत्वित्याशास्महे ।

इत्यनेकनारायणस्मृतिततयः

**श्रीविद्येशतीर्थश्रीपादाः**

**अध्यक्षाः, माध्वराद्धान्तसंवर्धकसभा**

---

**शुभकृत्संवत्सरस्य श्रीरामनवमीशुभावसरः**

**(चैत्रशुद्धपञ्चमीतः दशमीपर्यन्तम्, ६-०४-२०२२ तः ११-०४-२०२२)**

॥ श्रीरामकृष्णवेदव्यासा विजयन्ते ॥

## श्रीमदच्युतप्रज्ञ-जगद्गुरुश्रीपूर्णप्रज्ञ-श्रीसत्यतीर्थमहापीठम्

श्रीभण्डारकेरिम[illegible] श्रीभागवताश्रमप्रतिष्ठानम्, गिरिनगरम्, बेङ्गळूरु

प्रातःस्मरणीय-श्रीविद्यामान्यगुरुचरणसंस्थापित-माध्वराद्धान्तसंवर्धकसभा

नूतनश्रीभागवतकीर्तिधाम्नो लोकेशार्पणशुभावसरे,

श्रीमन्न्यायसुधामङ्गलमहोत्सवाङ्गतया समायोजितविद्वत्सम्मानार्हत्वेन परिगणितानां

**श्रीअडिग-शङ्करनारायणाचार्यमहोदयानां**

श्रीविद्यामान्यतीर्थकरकमलसञ्जातैः श्रीविद्येशतीर्थश्रीपादैः सामोदं प्रदत्तं प्रशस्तिपत्रम्।

श्रीअडिग-शङ्करनारायणाचार्य इति शुभनामधराणां

भवतां श्रीमदानन्दतीर्थरचितसुतीर्थेषु स्नातानां पाठप्रवचनादिदीक्षामनुलक्ष्य

श्रेयःप्रार्थनापूर्वकम्

# श्रीसुतीर्थभूषणः

इत्युपाधिं प्रदाय सम्भावयामहे।

प्रसादातिशयहेतुभूतामितोऽप्यतिशयेन माध्ववाङ्मयसेवां

भवन्मुखेन मध्वान्तर्गतो व्यासाभिन्नः श्रीरामचन्द्रः स्वीकरोत्वित्याशास्महे।

इत्यनेकनारायणस्मृतिततयः

श्रीविद्येशतीर्थश्रीपादाः

अध्यक्षाः, माध्वराद्धान्तसंवर्धकसभा

---

शुभकृत्संवत्सरस्य श्रीरामनवमीशुभावसरः

(चैत्रशुद्धपञ्चमीतः दशमीपर्यन्तम्, ६-०४-२०२२ तः ११-०४-२०२२)